

بِسْمِ اللّٰهِ الرَّحْمَنِ الرَّحِيم

# ಅಲ್ಲಾಹನ ಸಂರಕ್ಷಣೆಗಿರುವ ಮಾರ್ಗ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 02–02–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳನ್ನು ತಿಲಾವತ್ ಮಾಡಿದರು:*

بِسۡمِ ٱللَّهِ ٱلرَّحۡمَـٰنِ ٱلرَّحِيمِ
حمٓ (١) تَنزِيلُ ٱلۡكِتَـٰبِ مِنَ ٱللَّهِ ٱلۡعَزِيزِ ٱلۡعَلِيمِ (٢)
غَافِرِ ٱلذَّنۢبِ وَقَابِلِ ٱلتَّوۡبِ شَدِيدِ ٱلۡعِقَابِ ذِى ٱلطَّوۡلِ‌ۖ لَآ إِلَـٰهَ إِلَّا هُوَ‌ۖ إِلَيۡهِ ٱلۡمَصِيرُ (٣)

**ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್. ಹಾ ಮೀಮ್. ತನ್‌ಝೀಲುಲ್ ಕಿತಾಬಿ ಮಿನಲ್ಲಾಹಿಲ್ ಅಝೀಝಿಲ್ ಅಲೀಮ್ ಗಾಫಿರಿದ್ದನ್‌ಬಿ ವ ಖಾಬಿಲಿತೌಬಿ ಶದೀದಿಲ್ ಇಖಾಬಿ ಝಿತ್ತವ್‌ಲಿ, ಲಾ ಇಲಾಹ ಇಲ್ಲಾ ಹುವ ಇಲೈಹಿಲ್ ಮಸೀರ್. (40: 1–4).**

ٱللَّهُ لَآ إِلَـٰهَ إِلَّا هُوَ ٱلۡحَىُّ ٱلۡقَيُّومُ‌ۚ لَا تَأۡخُذُهُ ۥ سِنَةٌ۬ وَلَا نَوۡمٌ۬‌ۚ لَّهُ ۥ مَا فِى ٱلسَّمَـٰوَٲتِ وَمَا فِى ٱلۡأَرۡضِ‌ۗ مَن ذَا ٱلَّذِى يَشۡفَعُ عِندَهُ ۥۤ إِلَّا بِإِذۡنِهِۦ‌ۚ يَعۡلَمُ مَا بَيۡنَ أَيۡدِيهِمۡ وَمَا خَلۡفَهُمۡ‌ۖ وَلَا يُحِيطُونَ بِشَىۡءٍ۬ مِّنۡ عِلۡمِهِۦۤ إِلَّا بِمَا شَآءَ‌ۚ وَسِعَ كُرۡسِيُّهُ ٱلسَّمَـٰوَٲتِ وَٱلۡأَرۡضَ‌ۖ وَلَا يَـُٔودُهُ ۥ حِفۡظُهُمَا‌ۚ وَهُوَ ٱلۡعَلِىُّ ٱلۡعَظِيمُ

**ಅಲ್ಲಾಹು ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಖಯ್ಯೂಮ್, ಲಾ ತಅ್‌ಖುಝುಹೂ ಸಿನತುನ್ ವಲಾ ನೌಮ್. ಲಹು ಮಾಫಿಸ್ಸಮಾವಾತಿ ವಮಾಫಿಲ್ ಅರ್‌ಝ್. ಮನ್‌ಧ಼ಲ್ಲಧೀ಼ ಯಶ್‌ಫಉ ಇಂದಹು ಇಲ್ಲಾ ಬಿಇಝ್‌ನಿಹೀ, ಯಅ್‌ಲಮು ಮಾಬೈನ ಅಯ್‌ದೀಹಿಮ್ ವಮಾ ಖಲ್‌ಫಹುಮ್, ವಲಾ ಯುಹೀತೂನ ಬಿಶೈಯಿನ್ ಮಿನ್ ಇಲ್‌ಮಿಹೀ ಇಲ್ಲಾ ಬಿಮಾಶಾಅ, ವಸಿಅ ಕುರ್‌ಸಿಯ್ಯುಹುಸ್ಸಮಾವಾತಿ ವಲ್‌ಅರ್‌ಝ ವಲಾ ಯಊದುಹೂ ಹಿಫ್‌ಝುಹುಮಾ ವ ಹುವಲ್ ಅಲಿಯ್ಯುಲ್ ಅಝೀಮ್. (2:256)**

ಈ ವಚನಗಳ ಅರ್ಥ ಈ ರೀತಿಯಿದೆ:

ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಹಾ ಮೀಂ. ಪ್ರತಾಪಶಾಲಿಯೂ ಸರ್ವಜ್ಞನೂ ಆದ ಅಲ್ಲಾಹನಿಂದ ಈ ಗ್ರಂಥ ಅವತೀರ್ಣಗೊಂಡಿದೆ. (ಅವನು) ಪಾಪವನ್ನು ಕ್ಷಮಿಸುವವನೂ ಪಶ್ಚಾತ್ತಾಪವನ್ನು ಸ್ವೀಕರಿಸುವವನೂ ಕಠಿಣವಾಗಿ ಶಿಕ್ಷಿಸುವವನೂ ಔದಾರ್ಯವಂತನೂ ಆಗಿದ್ದಾನೆ. ಅವನ ಹೊರತು ಬೇರೆ ಆರಾಧ್ಯನಿಲ್ಲ. ಕೊನೆಯ ಮರಳಿಕೆ ಅವನ ಬಳಿಗೆಯೇ ಆಗಿದೆ. (40:1–4)

ಅಲ್ಲಾಹ್ – ಅವನ ಹೊರತು ಬೇರೆ ಆರಾಧ್ಯನಿಲ್ಲ. (ಅವನು) ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ (ಎಲ್ಲವನ್ನು) ನೆಲೆನಿಲ್ಲಿಸುವವನೂ ಆಗಿದ್ದಾನೆ. ತೂಕಡಿಕೆಯಾಗಲಿ, ನಿದ್ರೆಯಾಗಲಿ ಅವನಿಗಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ಅವನ ಅನುಮತಿಯಿಲ್ಲದೆ ಅವನ ಸನ್ನಿಧಿಯಲ್ಲಿ ಶಿಫಾರಸು ಮಾಡುವವರು ಯಾರಿದ್ದಾರೆ? ಅವರ ಮುಂದೆ ಮತ್ತು ಹಿಂದೆ ಇರುವ ಎಲ್ಲವನ್ನೂ ಅವನು ಬಲ್ಲನು. ಅವನು ಇಚ್ಛಿಸುವುದರ ಹೊರತು, ಅವನ ಜ್ಞಾನದಿಂದ ಏನನ್ನೂ ಅವರು ಗಳಿಸುವುದಿಲ್ಲ. ಅವನ ಸಿಂಹಾಸನ ಆಕಾಶಗಳಲ್ಲೂ ಭೂಮಿಯಲ್ಲೂ ವ್ಯಾಪಿಸಿಕೊಂಡಿದೆ. ಅವುಗಳ ಸಂರಕ್ಷಣೆ ಅವನನ್ನು ಆಯಾಸಗೊಳಿಸುವುದಿಲ್ಲ. ಅವನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ. (2:256 – ಆಯತುಲ್ ಕುರ್‌ಸೀ).

ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ಅಲ್ಲಾಹನ ಕೆಲವು ಗುಣವಿಶೇಷಗಳನ್ನು ಪ್ರಸ್ತಾಪಿಸಲಾಗಿದೆ. ಅಲ್ಲಾಹನ ವೈಭವವನ್ನೂ ಹಿರಿಮೆಯನ್ನೂ ವಿವರಿಸಲಾಗಿದೆ. ಪವಿತ್ರ ಖುರ್‌ಆನಿನ ಈ ವಚನಗಳ ಮಹತ್ವದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳು ಲಭಿಸುತ್ತವೆ. ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾರು ಬೆಳಗ್ಗೆ **ಹಾ ಮೀಮ್‌ನಿಂದ ಇಲೈಹಿಲ್ ಮಸೀರ್** ತನಕ ಪಠಿಸಿ ಅನಂತರ ಆಯತುಲ್ ಕುರ್‌ಸೀ ಸಹ ಪಠಿಸಿದರೆ ಇವುಗಳ ಮೂಲಕ ಸಂಜೆಯ ತನಕ ಅವನು ಸಂರಕ್ಷಿಸಲ್ಪಡುವನು. ಯಾರು ಈ ವಚನಗಳನ್ನು ಸಂಜೆಯ ಸಮಯದಲ್ಲಿ ಪಠಿಸುತ್ತಾನೋ ಅವನು ಅವುಗಳ ಮೂಲಕ ಬೆಳಗ್ಗಿನ ತನಕ ಸಂರಕ್ಷಿಸಲ್ಪಡುವನು.

**ಹಾ ಮೀಮ್** ಸೂರತುಲ್ ಮೂಮಿನ್‌ನ ಎರಡನೆಯ ವಚನವಾಗಿದೆ. ಇವುಗಳು ಹುರೂಫೆ ಮುಖತ್ತಆತ್‌ಗಳಾಗಿವೆ. ಹಾ ಮೀಮ್ ಎಂದರೆ ಹಮೀದ್ ಮತ್ತು ಮಜೀದ್ ಎಂದು. ಹಮೀದ್ ಎಂದರೆ ಸ್ತುತಿಸಲು ಅರ್ಹನಾದವನು. ವಾಸ್ತವಿಕ ಸ್ತುತಿ ಅವನಿಗೆ ಮಾತ್ರ ಅರ್ಹವಾಗಿದೆ. ಎಂದರೆ ಅಲ್ಲಾಹನೇ ಸ್ತುತ್ಯರ್ಹನಾಗಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಮ್‌ದ್ ಶಬ್ದದ ವಿವರಣೆ ನೀಡುತ್ತಾ ಹೇಳಿದರು: ಹಮ್‌ದ್ ಎಂಬ ಶಬ್ದವನ್ನು ಸ್ತುತಿಗೆ ಅರ್ಹನಾದವನು ಮಾಡಿದ ಒಳ್ಳೆಯ ಕೆಲಸಗಳಿಗೆ ಹೊಗಳಿಕೆಯಾಗಿ ಬಳಸಲಾಗುತ್ತದೆ. ಅದಲ್ಲದೆ ಒಬ್ಬನು ತನ್ನ ಇಚ್ಛೆಯಂತೆ ಸ್ವಂತ ನಿರ್ಧಾರದ ಪ್ರಕಾರ ನೀಡಿದ ಪಾರಿತೋಷಿಕಗಳನ್ನು ಸ್ತುತಿಸುವುದಕ್ಕೆ ಉಪಯೋಗಿಸುವ ಪದವೂ ಹಮ್‌ದ್ ಆಗಿದೆ. ವಾಸ್ತವಿಕವಾಗಿ ಹಮ್‌ದ್ ಎಂಬ ಪದಕ್ಕೆ ಅರ್ಹನಾದವನು ಎಲ್ಲಾ ಪ್ರಕಾಶಗಳ ಮತ್ತು ಅನುಗ್ರಹಗಳ ಉದ್ಭವ ಸ್ಥಾನವಾಗಿದ್ದಾನೆ. ಅವನು ಪ್ರಜ್ಞಾಪೂರ್ವಕವಾಗಿ ಔದಾರ್ಯ ದಯಪಾಲಿಸುತ್ತಾನೆ. ಅವನು ನಿರ್ಬಂಧಿತನಾಗಿ ಔದಾರ್ಯ ತೋರಿಸುವುದಿಲ್ಲ. ಹಮ್‌ದ್ ಎಂಬ ಶಬ್ದದ ಅರ್ಹತೆ ಎಲ್ಲವನ್ನೂ ತಿಳಿದಿರುವ ಮತ್ತು

ಎಲ್ಲವನ್ನೂ ನೋಡುತ್ತಿರುವ ಅಲ್ಲಾಹನಿಗೆ ಮಾತ್ರವಿದೆ. ಅವನೇ ಔದಾರ್ಯವಂತನಾಗಿದ್ದಾನೆ. ಆರಂಭದ ಮತ್ತು ಕೊನೆಯ ಎಲ್ಲಾ ಔದಾರ್ಯಗಳು ಅವನಿಂದಲೇ ಲಭಿಸುತ್ತವೆ. ಎಲ್ಲಾ ಸ್ತುತಿಗಳು ಅವನಿಗೋಸ್ಕರವಾಗಿವೆ. ಇಹಲೋಕದಲ್ಲೂ ಪರಲೋಕದಲ್ಲೂ. ಅವನ ಹೊರತು ಅನ್ಯರಿಗೆ ಸಂಬಂಧಿಸಿ ಮಾಡುವ ಹೊಗಳಿಕೆಗಳು ಸಹ ಮರಳಿ ಹೋಗುವುದು ಅವನ ಕಡೆಗೆಯೇ ಆಗಿದೆ.

ಹಮ್ದ್ ಎಂಬ ಶಬ್ದದಲ್ಲಿ ಇನ್ನೊಂದು ಸೂಚನೆ ಸಹ ಇದೆ. ಮಹೋನ್ನತನಾದ ಅಲ್ಲಾಹನು ಹೇಳುತ್ತಾನೆ: ಓ ನನ್ನ ದಾಸರೇ, ನನ್ನ ಗುಣವಿಶೇಷಗಳ ಮೂಲಕ ನನ್ನನ್ನು ಗುರುತಿಸಿರಿ. ನನ್ನ ಪರಿಪೂರ್ಣತೆಗಳ ಮೂಲಕ ನನ್ನನ್ನು ಗುರುತಿಸಿರಿ. ನನ್ನನ್ನು ಎಲ್ಲಾ ಪರಿಪೂರ್ಣ ಗುಣವಿಶೇಷಗಳನ್ನು ಮತ್ತು ಎಲ್ಲಾ ಪರಿಪೂರ್ಣತೆಗಳನ್ನು ತನ್ನಲ್ಲಿ ಜಮಾಯಿಸಿದವನೆಂದು ಯಾರು ದೃಢವಾಗಿ ನಂಬುತ್ತಾರೋ, ಯಾರು ಸಕಲ ಪರಿಪೂರ್ಣತೆಗಳನ್ನು ನನ್ನ ಕಡೆಗೆ ಅನ್ವಯಿಸಿ ಹೇಳುತ್ತಾರೋ ಅಂತಹ ಜನರು ನನ್ನ ಸುಜ್ಞಾನದ ಕಡೆಗೆ ಸಾಗುವವರಾಗಿದ್ದಾರೆ. ಸತ್ಯ ಅವರ ಜೊತೆಗಿದೆ. ಅವರು ಜಯಶಾಲಿಗಳಾಗುವವರಾಗಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ಅಲ್ಲಾಹನು ನಿಮ್ಮನ್ನು ಸುಖವಾಗಿರಿಸಲಿ. ನೀವು ಎದ್ದು ಮಹಾಶಕ್ತಿಶಾಲಿಯಾದ ಅಲ್ಲಾಹನ ಗುಣವಿಶೇಷಗಳನ್ನು ಅನ್ವೇಷಿಸಿರಿ. ಬುದ್ಧಿವಂತರ ಮತ್ತು ಚಿಂತಾಶೀಲರ ಹಾಗೆ ಅಲ್ಲಾಹನ ಗುಣವಿಶೇಷಗಳ ಬಗ್ಗೆ ಚಿಂತಿಸಿರಿ. ಎಂದರೆ ಗಾಢವಾಗಿ ಅಧ್ಯಯನ ಮಾಡಿರಿ. ಏಕೆಂದರೆ ಹಮ್ದ್ ಎಂಬ ಗುಣವಿಶೇಷವನ್ನು ಮನವರಿಕೆ ಮಾಡುವ ಮೂಲಕವೇ ಅನ್ಯ ಗುಣಗಳು ಮನವರಿಕೆ ಆಗುತ್ತವೆ ಅಥವಾ ಮನವರಿಕೆ ಆಗಲು ಸಾಧ್ಯವಾಗುತ್ತವೆ. ನೋಡಿರಿ, ನೀವು ಅಲ್ಲಾಹನ ಪರಿಪೂರ್ಣತೆಗಳ ಬಗ್ಗೆ ಪ್ರತಿಯೊಂದು ಪಾರ್ಶ್ವದಿಂದಲೂ ಗಾಢವಾಗಿ ವೀಕ್ಷಿಸಿರಿ. ಈ ವಿಶ್ವದ ಬಾಹ್ಯವನ್ನು ಮತ್ತು ಅದರ ಅಂತರಂಗವನ್ನು ಹೇಗೆ ಪರಿಶೋಧಿಸಬೇಕೆಂದರೆ ಒಬ್ಬ ಮಹತ್ವಾಕಾಂಕ್ಷಿ ಮನುಷ್ಯನು ತನ್ನ ಆಶೆಗಳನ್ನು ಈಡೇರಿಸಲು ಮಗ್ನನಾಗುವ ಹಾಗೆ. ನೀವು ಅಲ್ಲಾಹನ ಪರಿಪೂರ್ಣತೆಗಳನ್ನು ಗುರುತಿಸಿರಿ. ನೀವು ಅಲ್ಲಾಹನ ಸುವಾಸನೆ ಗಳಿಸಿರಿ. ಹಾಗೆ ಆದರೆ ನೀವು ಅಲ್ಲಾಹನನ್ನು ಗಳಿಸಿದಂತಾಗುತ್ತದೆ. ಇದು ಎಂತಹ ರಹಸ್ಯವೆಂದರೆ ಮಾರ್ಗದರ್ಶನವನ್ನು ಆಶಿಸುವವರಿಗೆ ಮಾತ್ರ ಅದು ತಿಳಿಯುತ್ತದೆ. ಅಲ್ಲಾಹನು ಸ್ತುತಿಗೆ ಅರ್ಹನೆಂಬ ತಿಳುವಳಿಕೆ ನಮ್ಮಲ್ಲಿ ಮೂಡಬೇಕಾಗಿದೆ. ಹಾಗೆ ಆದಲ್ಲಿ ಅಲ್ಲಾಹನ ಉಳಿದ ಗುಣವಿಶೇಷಗಳನ್ನು ನಾವು ಗುರುತಿಸುವವರಾಗುವೆವು.

ಅಲ್ಲಾಹನು ತಾನು ಮಜೀದ್ ಎಂದು ಹೇಳುತ್ತಾನೆ. ಅವನು ಮಹಾಮಹಿಮನಾಗಿದ್ದಾನೆ. ಅವನು ಅತ್ಯಂತ ಸ್ತುತ್ಯರ್ಹನೂ ಅತ್ಯುನ್ನತ ವೈಭವಶಾಲಿಯೂ ಆಗಿದ್ದಾನೆ. ಆ ಉನ್ನತಿಯನ್ನು ತಲಪಲು ಯಾರಿಗೂ ಸಾಧ್ಯವಿಲ್ಲ. ಅವನ ಅನುಗ್ರಹಗಳಿಗೆ ಕೊನೆಯಿಲ್ಲ. ಅವನು ಕೊಡುತ್ತಾನೆ ಮತ್ತು ಕೊಡುತ್ತಾ ಮುಂದುವರಿಯುತ್ತಾನೆ ಮತ್ತು ಎಂದೂ ಆಯಾಸಪಡುವುದಿಲ್ಲ. ಆದುದರಿಂದ ಈ ಪವಿತ್ರ ವಚನಗಳನ್ನು ಪಠಿಸುವಾಗ ಅಲ್ಲಾಹನು ಮಹಾಮಹಿಮನೆಂಬ ಅರ್ಥ ನಮ್ಮ ಮುಂದಿರಬೇಕು. ಮೊದಲು ಹಮ್ದ್ ಶಬ್ದದ ಅರ್ಥ ಅನಂತರ ಮಜೀದ್ ಶಬ್ದದ ಅರ್ಥ ಗ್ರಹಿಸಿರಬೇಕು.

ಅಲ್ಲಾಹನು ಅಝೀಝ್ ಆಗಿದ್ದಾನೆ. ಎಂದರೆ ಅವನು ಎಲ್ಲಾ ಶಕ್ತಿಗಳ ಒಡೆಯನಾಗಿದ್ದಾನೆ. ಅವನು ಎಲ್ಲಾ ಶಕ್ತಿಶಾಲಿಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದಾನೆ. ಅವನು ಸೋಲಿಸಲ್ಪಡದವನಾಗಿದ್ದಾನೆ. ಎಲ್ಲಾ ಗೌರವಗಳು ಅವನಿಗೆ ಸೇರಿವೆ. ಅವನ ಘನತೆಯನ್ನು ಎಣಿಸಲಾಗದು. ಅವನು ಪ್ರತಿಯೊಂದರ ಮೇಲೆ ಆವರಿಸಿದ್ದಾನೆ. ಅವನ ಹಾಗೆ ಆಗಲು ಯಾರಿಗೂ ಸಾಧ್ಯವಿಲ್ಲ. ಇವು ಅಝೀಝ್ ಶಬ್ದದ ಅರ್ಥಗಳಾಗಿವೆ.

ಅಲ್ಲಾಹನು ಅಲೀಮ್ ಆಗಿದ್ದಾನೆ. ಅವನು ಪ್ರತಿಯೊಂದು ವಿಷಯದ ಬಗ್ಗೆ ತಿಳಿದವನಾಗಿದ್ದಾನೆ. ಮೊದಲು ಸಂಭವಿಸಿದವುಗಳ ಬಗ್ಗೆ ಮತ್ತು ಮುಂದೆ ಸಂಭವಿಸಲಿರುವವುಗಳ ಬಗ್ಗೆ ಅವನು ಅರಿವುಳ್ಳವನಾಗಿದ್ದಾನೆ. ಅವನಿಂದ ಯಾವುದೇ ವಿಷಯ ಮರೆಯಾಗಿರಲಾರದು. ಪ್ರತಿಯೊಂದರ ಬಗ್ಗೆ ಪರಿಪೂರ್ಣ ಜ್ಞಾನ ಅವನಿಗಿದೆ. ಇಂತಹ ಮಹಿಮಾವಂತನಾದ ಅಲ್ಲಾಹನು ಈ ಗ್ರಂಥವಾದ ಖುರ್‌ಆನನ್ನು ಅವತೀರ್ಣಗೊಳಿಸಿದನು. ಕೊನೆಯ ಶರೀಅತ್ ಆಗಿರುವ ಈ ಗ್ರಂಥವನ್ನು ಅವತೀರ್ಣಗೊಳಿಸಿದನು. ಅದರಲ್ಲಿ ಎಲ್ಲಾ ಕಾಲದ ಸಕಲ ಆವಶ್ಯಕತೆಗಳೂ ಅಡಕವಾಗಿವೆ. ಅದರ ಪ್ರಬೋಧನೆಗಳನ್ನು ಸರಿಯಾದ ರೀತಿಯಲ್ಲಿ ಅನುಸರಿಸುವುದರಿಂದ ಮಾತ್ರವೇ ಈಗ ಸಂರಕ್ಷಣೆಯೂ ವಿಜಯವೂ ಲಭಿಸುವುದು.

ಅನಂತರ ಅಲ್ಲಾಹನು **ಗಾಫಿರುಝ್ಝುಂಬ್** (ಪಾಪದೋಷಗಳನ್ನು ಕ್ಷಮಿಸುವವನು) ಎಂದು ಹೇಳಲಾಗಿದೆ. ಅವನ ಮುಂದೆ ಬಾಗಿಕೊಂಡು ಪಾಪದೋಷಗಳ ಬಗ್ಗೆ ಕ್ಷಮೆಯನ್ನು ಯಾಚಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಿಷಯದ ಬಗ್ಗೆ ಅನೇಕ ಸ್ಥಳಗಳಲ್ಲಿ ವಿಶದೀಕರಿಸಿದ್ದಾರೆ. ಯಾವಾಗಲೂ ಪಾಪದೋಷಗಳ ಬಗ್ಗೆ ಅಲ್ಲಾಹನಿಂದ ಕ್ಷಮೆಯನ್ನು ಯಾಚಿಸುತ್ತಿರಬೇಕು ಎಂದು ಹೇಳಿದ್ದಾರೆ. ಅವರು ಒಮ್ಮೆ ಹೀಗೆ ಹೇಳಿದರು: ಮನುಷ್ಯನಿಗೆ ನೀಡಲ್ಪಡುವ ಪ್ರಕಾಶ ತಾತ್ಕಾಲಿಕವಾಗಿರುತ್ತದೆ. ಎಂದರೆ ಮನುಷ್ಯನಿಗೆ ದೊರಕುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಕಾಶ ತಾತ್ಕಾಲಿಕವಾಗಿರುತ್ತದೆ. ಅದನ್ನು ಯಾವಾಗಲೂ ತನ್ನ ಜೊತೆಯಲ್ಲಿ ಇರಿಸಿಕೊಳ್ಳಲು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುವ ಆವಶ್ಯಕತೆ ಇರುತ್ತದೆ. ಇಸ್ತಿಗ್‌ಫಾರ್ ಎಂಬುದರ ಅರ್ಥ ಅಲ್ಲಾಹನಿಂದ ಈಗ ದೊರೆತಿರುವ ಪ್ರಕಾಶವು ಸಂರಕ್ಷಿಸಲ್ಪಡಲಿ ಮತ್ತು ಇನ್ನಷ್ಟು ಪ್ರಕಾಶ ದೊರಕಲಿ ಎಂದಾಗಿದೆ. ಈ ಪ್ರಕಾಶವನ್ನು ಗಳಿಸಲು ಐದು ಹೊತ್ತಿನ ನಮಾಝ್ ಸಹ ಇದೆ. ಅದರ ಮೂಲಕ ಪ್ರತಿದಿನ ಅಲ್ಲಾಹನೊಂದಿಗೆ ಹೃತ್ಪೂರ್ವಕವಾಗಿ ಬೇಡಿಕೊಳ್ಳಬಹುದಾಗಿದೆ. ಯಾರಿಗೆ ಜ್ಞಾನವಿದೆಯೋ ಅವನು ತಿಳಿದುಕೊಳ್ಳಬಲ್ಲನು ನಮಾಝ್ ಒಂದು ಮಿಅ್‌ರಾಜ್ ಆಗಿದೆ ಎಂದು. ನಮಾಝ್‌ನಲ್ಲಿ ಮಾಡುವ ವಿನಯಾನ್ವಿತ ಅಳಲುಭರಿತ ಪ್ರಾರ್ಥನೆಯೇ ಆಧ್ಯಾತ್ಮಿಕ ಮತ್ತು ಶಾರೀರಿಕವಾದ ಎಲ್ಲಾ ರೋಗಗಳಿಂದ ಉಪಶಮನ ನೀಡುತ್ತದೆ. ಆದುದರಿಂದ ಪ್ರತಿಯೊಂದು ರೋಗದ ನಿವಾರಣೆಗೆ

ಪ್ರಾರ್ಥನೆಯ ಆವಶ್ಯಕತೆ ಇದೆ. ಪ್ರಾರ್ಥನೆಗಳಲ್ಲಿ ಇಸ್ತಿಗ್‌ಫಾರ್‌ಗಳ ಆವಶ್ಯಕತೆ ಇವೆ. ನಮಾಝ್ ಸಹ ಅದರ ಭಾಗವೇ ಆಗಿದೆ.

ಪವಿತ್ರ ಖುರ್‌ಆನಿನ ಈ ವಚನಗಳನ್ನು ಪಠಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವರು. ಆದರೆ ಕೇವಲ ಪಠಿಸುವುದರಿಂದ ಏನೂ ಲಭಿಸಲಾರದು. ನಮ್ಮ ಕರ್ಮಗಳನ್ನೂ ಉತ್ತಮಪಡಿಸಬೇಕು. ನಾವು ಇಸ್ತಿಗ್‌ಫಾರ್ ಮಾಡಬೇಕು. ಯಾವ ರೀತಿ ನಮಾಝ್‌ಗಳನ್ನು ಸಂರಕ್ಷಿಸಬೇಕು ಮತ್ತು ಆ ಮೂಲಕ ನಮ್ಮನ್ನು ನಾವು ಸಂರಕ್ಷಿಸಬಹುದು ಎಂಬುದರ ಬಗ್ಗೆ ಲಕ್ಷ್ಯ ನೀಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಸ್ತಿಗ್‌ಫಾರ್ ಶಬ್ದದ ಅರ್ಥವೇನೆಂದರೆ ಯಾವುದೇ ಪಾಪಕೃತ್ಯ ಸಂಭವಿಸಬಾರದು ಮತ್ತು ಪಾಪಕೃತ್ಯ ಮಾಡುವಂತಹ ಶಕ್ತಿ ಪ್ರಕಟವಾಗಬಾರದು ಎಂದು. ಮನುಷ್ಯನು ಮನಸ್ಸಿನಲ್ಲಿಯೇ ವಾಸ್ತವಿಕವಾಗಿ ಕ್ಷಮೆಯನ್ನು ಯಾಚಿಸುತ್ತಾ ಇರಬೇಕು. ನನ್ನಿಂದ ಸಂಭವಿಸಿರುವ ಪಾಪಕೃತ್ಯಗಳಿಗೆ ಶಿಕ್ಷಿಸಲ್ಪಡದಿರಲು ಯಾಚಿಸುತ್ತಿರಬೇಕು. ಇನ್ನು ಮುಂದೆ ಸತ್ಕರ್ಮ ಮಾಡಲು ಭಾಗ್ಯ ನೀಡಬೇಕೆಂದು ಅಲ್ಲಾಹನನ್ನು ಬೇಡುತ್ತಾ ಇರಬೇಕು. ಮತ್ತು ಪಾಪಕೃತ್ಯಗಳನ್ನು ಮಾಡುವುದರಿಂದ ರಕ್ಷಣೆಯನ್ನು ಬೇಡಿಕೊಳ್ಳಬೇಕು. ಪ್ರಾರ್ಥಿಸುವಾಗ ಹೃದಯದಲ್ಲಿ ಉತ್ಸಾಹವಿರಬೇಕು. ಹೃದಯದಿಂದ ಹೊರಡುವ ಮಾತುಗಳೇ ಅಲ್ಲಾಹನಿಗೆ ತಲಪುತ್ತವೆ. ತಮ್ಮ ಸ್ವಂತ ಭಾಷೆಯಲ್ಲಿಯೇ ಅಲ್ಲಾಹನನ್ನು ಬಹಳ ಬೇಡಿಕೊಳ್ಳಬೇಕು. ಅದರಿಂದ ಹೃದಯದ ಮೇಲೆಯೂ ಪ್ರಭಾವ ಉಂಟಾಗುತ್ತದೆ.

ಆದುದರಿಂದ ನಾವು ಇಸ್ತಿಗ್‌ಫಾರ್ ಮಾಡುವ ಮತ್ತು ಅದರ ಆತ್ಮವನ್ನು ಮನವರಿಕೆ ಮಾಡುವ ಆವಶ್ಯಕತೆ ಇದೆ. ಝಿಕ್ರ್ ಮತ್ತು ಪ್ರಾರ್ಥನೆಗಳು ಪ್ರಯೋಜನಕರವಾಗುವುದು ಅವುಗಳ ಜೊತೆಗೆ ಕರ್ಮಗಳ ಸ್ಥಿತಿ ಉತ್ತಮಗೊಂಡಾಗ ಮಾತ್ರವಾಗಿದೆ. ಕೆಲವರು ಕೇಳುತ್ತಾರೆ ನಾವು ಯಾವಾಗಲೂ ಪಠಿಸುತ್ತಾ ಇರಬಹುದಾದ ಚಿಕ್ಕದಾದೊಂದು ದುಆ ನಮಗೆ ಹೇಳಿಕೊಡಿರಿ ಎಂದು. ಚಿಕ್ಕ ದುಆಗಳು ಸಹ ಫಲಕಾರಿಯಾಗುವುದು ಅವುಗಳ ಜೊತೆ ಫರ್ಝ್ ಕರ್ಮಗಳನ್ನು ಮಾಡುವಾಗ ಮಾತ್ರವಾಗಿದೆ. ನಮಾಝ್‌ಗಳನ್ನು ಸಮಯ ಬದ್ಧವಾಗಿ ಅನುಷ್ಠಿಸುತ್ತಿರಬೇಕು. ಅವುಗಳನ್ನು ಉತ್ಸಾಹಭರಿತರಾಗಿ ಅನುಷ್ಠಿಸಬೇಕು. ಹಾಗೆ ಮಾಡಿದರೆ ಮಾತ್ರ ಧಿಕ್ರ್‌ಗಳು ಪ್ರಯೋಜನಕರವಾಗುವುವು.

ಅಲ್ಲಾಹನ ಇನ್ನೊಂದು ಗುಣವಿಶೇಷ **ಖಾಬಿಲುತ್ತೌಬ** ಎಂದಾಗಿದೆ. ಅವನು ತೌಬವನ್ನು ಅಂಗೀಕರಿಸುವವನಾಗಿದ್ದಾನೆ. ತೌಬ ಎಂದರೆ ತಾನು ಮಾಡಿದ ಪಾಪಕೃತ್ಯಗಳ ಬಗ್ಗೆ ಕ್ಷಮೆಯನ್ನು ಬೇಡಕೊಳ್ಳುತ್ತಾ ಅಲ್ಲಾಹನ ಕಡೆಗೆ ಮರಳುವುದು ಆಗಿದೆ. ನಾನು ಇನ್ನು ಮುಂದೆ ಪಾಪ ಕೃತ್ಯಗಳನ್ನು ಮಾಡಲಿಕ್ಕಿಲ್ಲ ಮತ್ತು ಪಾಪ ಕೃತ್ಯಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಯಾವಾಗಲೂ ಪ್ರಯತ್ನ ಮಾಡುತ್ತಾ ಇರುವೆನು ಎಂಬ ಪ್ರತಿಜ್ಞೆಯೊಂದಿಗೆ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾದರೆ ಇಂತಹ ಭಾವನೆ ಮತ್ತು ನಿರ್ಧಾರದೊಂದಿಗೆ ತನ್ನ ಬಳಿಗೆ ಬರುವವನ ತೌಬವನ್ನು ಅಲ್ಲಾಹನು ಅಂಗೀಕರಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜುಮುಅ ಮತ್ತು ಎರಡು ಈದ್‌ಗಳ ದಿನಗಳಿಗಿಂತ ಉತ್ತಮ ದಿನ ಬೇರೆ ಯಾವುದಿದೆ? ಮನುಷ್ಯನು ತೌಬ ಮಾಡುವ ದಿನ ಈ ದಿನಗಳಿಗಿಂತ ಉತ್ತಮವಾಗಿದೆ. ಪ್ರತಿಯೊಂದು ಈದ್‌ಗಿಂತ ಉತ್ತಮ ದಿನ ಅದಾಗಿದೆ. ಅದು ಏಕೆ? ಮನುಷ್ಯನು ಮಾಡುವ ಕೆಟ್ಟಕೃತ್ಯಗಳು ಮನುಷ್ಯನನ್ನು ನರಕಕ್ಕೆ ಸಮೀಪಗೊಳಿಸುತ್ತಾ ಇರುತ್ತವೆ. ಅಲ್ಲಾಹನ ಕೋಪದ ಕೆಳಗೆ ಅವನನ್ನು ತರುತ್ತಾ ಇರುತ್ತವೆ. ಅವನ ಕೆಟ್ಟ ಕೆಲಸಗಳ ದಾಖಲೆ ತೌಬದ ಮೂಲಕ ಅಳಿಸಿ ಬಿಡಲಾಗುತ್ತದೆ. ಅವನ ಪಾಪಗಳು ಕ್ಷಮಿಸಲ್ಪಡುತ್ತವೆ. ಅಲ್ಲಾಹನು ಹೇಳುತ್ತಾನೆ: إِنَّ ٱللَّهَ يُحِبُّ ٱلتَّوَّٰبِينَ وَيُحِبُّ ٱلۡمُتَطَهِّرِينَ **ಇನ್ನಲ್ಲಾಹ ಯುಹಿಬ್ಬುತ್ತೌವ್ವಾಬೀನ ವ ಯುಹಿಬ್ಬುಲ್ ಮುತತಹ್ಹಿರೀನ್.** ಖಂಡಿತವಾಗಿಯೂ ಅಲ್ಲಾಹನು ಪಶ್ಚಾತ್ತಾಪಪಡುವವರನ್ನು ಪ್ರೀತಿಸುತ್ತಾನೆ. (ಬಾಹ್ಯವಾಗಿಯೂ ಆಂತರಿಕವಾಗಿಯೂ) ಪರಿಶುದ್ಧರಾಗಿರುವವರನ್ನು ಅವನು ಇಷ್ಟಪಡುತ್ತಾನೆ. (2:223).

ಈ ವಚನದಿಂದ ತಿಳಿಯುವುದೇನೆಂದರೆ ತೌಬ ಮಾಡುವವರನ್ನು ಅಲ್ಲಾಹನು ಪ್ರೀತಿಸುತ್ತಾನೆಂದು ಮಾತ್ರವಲ್ಲದೆ ವಾಸ್ತವಿಕ ತೌಬದೊಂದಿಗೆ ವಾಸ್ತವಿಕ ಪರಿಶುದ್ಧತೆಯನ್ನು ಹೊಂದುವುದು ಶರತ್ತಾಗಿದೆ ಎಂದು ಸಹ ಸ್ಪಷ್ಟವಾಗುತ್ತದೆ. ಪ್ರತಿಯೊಂದು ರೀತಿಯ ಮಾಲಿನ್ಯದಿಂದ ದೂರ ಸರಿಯುವುದು ಆವಶ್ಯಕವಾದ ಶರತ್ತಾಗಿದೆ. ಕೇವಲ ಶಬ್ದಗಳ ಉಚ್ಚಾರಣೆಯ ತೌಬದಿಂದ ಯಾವ ಪ್ರಯೋಜನವೂ ದೊರಕಲಾರದು. ಮನುಷ್ಯನು ತನ್ನ ಕೆಟ್ಟ ಕೃತ್ಯಗಳಿಂದ ಪಶ್ಚಾತ್ತಾಪಗೊಂಡು ಅಲ್ಲಾಹನೊಂದಿಗೆ ಸತ್ಯವಾದ ಪ್ರತಿಜ್ಞೆ ಮಾಡಿ ತನ್ನನ್ನು ಸುಧಾರಣೆ ಮಾಡಿ ಅಲ್ಲಾಹನ ಆಜ್ಞೆಗಳ ಮುಂದೆ ತಲೆ ಬಾಗುವುದಾದರೆ ಅದು ಅವನಿಗೆ ಅತ್ಯಂತ ಶುಭದಾಯಕ ದಿನವಾಗುವುದು. ಅವನ ಕೆಟ್ಟಕೃತ್ಯಗಳ ಕಾರಣದಿಂದ ಅವನಿಗೋಸ್ಕರ ರಹಸ್ಯವಾಗಿ ಸಿದ್ಧಪಡಿಸಲಾಗುವ ಶಿಕ್ಷೆಯಿಂದ ತೌಬ ಮನುಷ್ಯನನ್ನು ರಕ್ಷಿಸುವುದು. ಅವನು ಅನಂತರ ಏನನ್ನು ಗಳಿಸುತ್ತಾನೋ ಅದರ ಬಗ್ಗೆ ಅವನಿಗೆ ಪ್ರತೀಕ್ಷೆಯೇ ಇದ್ದಿರಲಾರದು. ಅಲ್ಲಾಹನು ಬಹಳ ಕಾರುಣ್ಯನಿಧಿಯೂ ದಯಾಮಯನೂ ಆಗಿದ್ದಾನೆ. ಅವನು ಮನುಷ್ಯನ ಹಾಗೆ ಕಠಿಣ ಹೃದಯಿ ಅಲ್ಲ. ಮನುಷ್ಯನು ಒಂದು ಪಾಪಕೃತ್ಯಕ್ಕೆ ಪ್ರತೀಕಾರ ಮಾಡಲು ಪೀಳಿಗೆಗಳನ್ನು ಬೆನ್ನಟ್ಟುತ್ತಾನೆ. ಅವನು ನಾಶಮಾಡಲು ಇಚ್ಛಿಸುತ್ತಾನೆ. ಆದರೆ ಕಾರುಣ್ಯನಿಧಿಯೂ ದಯಾಮಯನೂ ಆಗಿರುವ ಅಲ್ಲಾಹನು ಎಪ್ಪತ್ತು ವರ್ಷಗಳ ಕಾಲ ಮಾಡಿದ ಪಾಪ ಕೃತ್ಯಗಳನ್ನು ಒಂದು ಕ್ಷಣದಲ್ಲಿ ಒಂದು ವಚನದಿಂದ ಕ್ಷಮಿಸುತ್ತಾನೆ.

ಅನಂತರ ಅಲ್ಲಾಹನ ಬಗ್ಗೆ **ಝಿತ್ತವ್‌ಲಿ** ಔದಾರ್ಯವಂತ, ಬಹಳ ಕೊಡುವವನು, ಅತ್ಯಂತ ಹೆಚ್ಚು ಲಾಭ ನೀಡುವವನು ಎಂದು ವರ್ಣಿಸಲಾಗಿದೆ. ಅವನು ನೀಡುವುದಕ್ಕೆ ಯಾವ ಮಿತಿಯೂ ಇರುವುದಿಲ್ಲ. ಅವನಿಗೆ ಎಂತಹ ಶಕ್ತಿ ಇದೆ ಎಂದರೆ ಅವನು ಎಲ್ಲವನ್ನೂ ನೀಡಬಲ್ಲವನಾಗಿದ್ದಾನೆ. ಅವನ ಖಜಾನೆಗಳು ಅಪಾರವಾಗಿವೆ. ಅಲ್ಲಾಹನು ಹೇಳುತ್ತಾನೆ: ನೀವು ನನ್ನ ಈ ಗುಣಗಳನ್ನು ನೆನಪಿನಲ್ಲಿ ಇರಿಸುವಿರಾದರೆ ನೀವು

ಯಾವಾಗಲೂ ಅನುಗ್ರಹ ಗಳಿಸುತ್ತಾ ಇರುವಿರಿ. ಅವನಷ್ಟು ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನು ಬೇರೆ ಯಾರೂ ಇಲ್ಲ. ನಾವು ಇಹಲೋಕದಲ್ಲಿಯೂ ಮೃತರಾದ ನಂತರವೂ ಅವನ ಕಡೆಗೆಯೇ ಹೋಗಬೇಕಾಗಿದೆ. ಕೊನೆಗೆ ಅಲ್ಲಾಹನ ಕಡೆಗೆಯೇ ಮರಳಲಿಕ್ಕಿದೆ ಎಂಬ ಭಾವನೆ ಇರುವುದಾದರೆ ಒಳಿತುಗಳನ್ನು ಮಾಡಲು ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ಶ್ರದ್ಧೆ ಉಂಟಾಗುವುದು. ನಮ್ಮ ಸ್ಥಿತಿ ಹೀಗೆ ಆದರೆ ಖಂಡಿತವಾಗಿಯೂ ಅಲ್ಲಾಹನು ಸಂರಕ್ಷಣೆ ನೀಡುವನು.

ಇನ್ನು ಆಯತುಲ್ ಕುರ್‌ಸೀ. ಆಯತುಲ್ ಕುರ್‌ಸೀ ಬಗ್ಗೆ ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಪ್ರತಿಯೊಂದು ವಸ್ತುವಿಗೆ ಒಂದು ಉಬ್ಬುಡುಬ್ಬವಿರುತ್ತದೆ. ಪವಿತ್ರ ಖುರ್‌ಆನಿನ ಡುಬ್ಬ ಸೂರತುಲ್ ಬಖರ ಆಗಿದೆ. ಆ ಅಧ್ಯಾಯದಲ್ಲಿ ಎಂತಹ ಒಂದು ವಚನವಿದೆ ಎಂದರೆ ಅದು ಎಲ್ಲಾ ವಚನಗಳ ನೇತಾರನಾಗಿದೆ. ಅದು ಆಯತುಲ್ ಕುರ್‌ಸೀ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **ಅಲ್ಲಾಹು ಲಾಇಲಾಹ ಇಲ್ಲಾಹುವಲ್ ಹಯ್ಯುಲ್ ಖಯ್ಯೂಮ್** ಎಂದರೆ ಅಲ್ಲಾಹನ ಹೊರತು ಅನ್ಯ ದೇವನಿಲ್ಲ. ಅವನೇ ಪ್ರತಿಯೊಂದು ಜೀವಿಯ ಜೀವವಾಗಿದ್ದಾನೆ. ಅವನು ಪ್ರತಿಯೊಂದರ ಆಶ್ರಯದಾತನಾಗಿದ್ದಾನೆ. ಈ ವಚನದ ಪದಗಳ ಅರ್ಥ, ಅಲ್ಲಾಹನೇ ಜೀವಂತನಾಗಿರುವ ದೇವನಾಗಿದ್ದಾನೆ ಹಾಗೂ ಅವನು ಸ್ವತಃ ನೆಲೆನಿಂತವನಾಗಿದ್ದಾನೆ. ಆದುದರಿಂದ ಅಲ್ಲಾಹನು ಮಾತ್ರ ಜೀವಂತ ದೇವನೂ ಅವನು ಮಾತ್ರ ಸ್ವತಃ ನೆಲೆನಿಂತವನೂ ಆಗಿರುವಾಗ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಅವನ ಹೊರತು ಜೀವಂತವಾಗಿ ಕಾಣಿಸುವ ಪ್ರತಿಯೊಬ್ಬ ವ್ಯಕ್ತಿ ಅಲ್ಲಾಹನ ಜೀವದಿಂದಲೇ ಜೀವಿಸಿರುತ್ತಾನೆ. ಭೂಮ್ಯಾಕಾಶಗಳಲ್ಲಿ ನೆಲೆ ನಿಂತಿರುವ ಪ್ರತಿಯೊಂದು ಸಹ ಅಲ್ಲಾಹನ ಮೂಲಕವೇ ನೆಲೆನಿಂತಿದೆ.

ಹಝ್ರ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಅಲ್ಲಾಹನ ಬಗ್ಗೆ ಹಯ್ಯು ಮತ್ತು ಖಯ್ಯೂಮ್ ಎಂದು ಪ್ರಸ್ತಾಪಿಸಲಾಗಿದೆ. ಹಯ್ಯು ಎಂದರೆ ಸ್ವತಃ ಜೀವಂತವಾಗಿರುವವನು ಮತ್ತು ಇತರರಿಗೆ ಜೀವವನ್ನು ದಯಪಾಲಿಸುವವನು. ಖಯ್ಯೂಮ್ ಎಂದರೆ ಸ್ವತಃ ನೆಲೆ ನಿಂತಿರುವವನು ಮತ್ತು ಅನ್ಯರು ನೆಲೆನಿಂತಿರುವುದಕ್ಕೆ ಮೂಲ ಕಾರಣನಾದವನು. ಪ್ರತಿಯೊಂದು ವಸ್ತುವಿನ ಬಾಹ್ಯ ಮತ್ತು ಆಂತರಿಕ ನೆಲೆನಿಲ್ಲುವಿಕೆ ಮತ್ತು ಜೀವದಿಂದಿರುವಿಕೆ ಅಲ್ಲಾಹನ ಈ ಎರಡು ಗುಣಗಳ ಪರಿಣಾಮಗಳಾಗಿವೆ. ಆದುದರಿಂದ ಹಯ್ಯು ಎಂಬ ಶಬ್ದ ಅಲ್ಲಾಹನನ್ನು ಆರಾಧಿಸಬೇಕೆಂದು ಸೂಚಿಸುತ್ತದೆ. ಸೂರತುಲ್ ಫಾತಿಹದ **ಇಯ್ಯಾಕನಅ್‌ಬುದು** (ದೇವಾ) ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಎಂಬ ವಚನ ಇದನ್ನೇ ಪ್ರಕಟಿಸುತ್ತದೆ. **ಅಲ್ ಖಯ್ಯೂಮ್** ಎಂಬ ಪದ, ಅಲ್ಲಾಹನಿಂದ ಆಶ್ರಯವನ್ನು ಯಾಚಿಸಬೇಕೆಂದು ಸೂಚಿಸುತ್ತದೆ. **ಇಯ್ಯಾಕ ನಸ್ತಈನ್** ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ ಎಂಬ ವಚನದ ಮೂಲಕ ಇದನ್ನು ಪ್ರಕಟಿಸಲಾಗಿದೆ.

ಆಯತುಲ್ ಕುರ್‌ಸೀಯಲ್ಲಿ ಪ್ರಸ್ತಾಪಿಸಲಾದ ಶಫಾಅತ್ (ಶಿಫಾರಸು) ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರತಿಯೊಬ್ಬ ಮನುಷ್ಯ ಬೇರೆ ಒಬ್ಬನಿಗೋಸ್ಕರ ದುಆ ಮಾಡುವಾಗ ಅವನು ಒಂದು ರೀತಿಯಲ್ಲಿ ಶಫಾಅತ್ ಮಾಡುತ್ತಾನೆ. ಒಬ್ಬ ಸತ್ಯವಿಶ್ವಾಸಿಗೆ ಇಂತಹ ಗುಣವಿರಬೇಕು. ಅವನು ಯಾವಾಗಲೂ ಈ ರೀತಿ ದುಆ ಮಾಡುತ್ತಾ ಇರಬೇಕು. ಪವಿತ್ರ ಖುರ್‌ಆನ್ ಆಜ್ಞೆ ನೀಡಿರುವುದೇನೆಂದರೆ ಯಾವೊಬ್ಬ ವ್ಯಕ್ತಿ ಅಲ್ಲಾಹನ ಮುಂದೆ ಹೆಚ್ಚು ಬಾಗಿಕೊಂಡಿರುತ್ತಾನೋ ಅವನು ತನ್ನ ಬಲಹೀನ ಸಹೋದರನಿಗೋಸ್ಕರ ಪ್ರಾರ್ಥಿಸಬೇಕು ಮತ್ತು ಅವನಿಗೆ ಆಧ್ಯಾತ್ಮಿಕ ಉನ್ನತಿ ದೊರಕಲು ಯಾಚಿಸಬೇಕು. ಇದು ವಾಸ್ತವಿಕ ಶಫಾಅತ್ ಆಗಿದೆ. ಆದುದರಿಂದ ನಾವು ನಮ್ಮ ಸಹೋದರರಿಗೋಸ್ಕರ ನಿಸ್ಸಂಶಯವಾಗಿ ದುಆ ಮಾಡುತ್ತೇವೆ. ಅಲ್ಲಾಹನು ಅವರಿಗೆ ಶಕ್ತಿ ನೀಡಲಿ. ಅವರಿಂದ ವಿಪತ್ತು ದೂರ ಸರಿಸಲಿ ಎಂದೆಲ್ಲಾ ಪ್ರಾರ್ಥಿಸುತ್ತೇವೆ. ಇದು ಸಹಾನುಭೂತಿಯ ಒಂದು ರೀತಿಯಾಗಿದೆ.

ಹಝ್ರ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಎಲ್ಲಾ ಮನುಷ್ಯರು ಒಂದು ಶರೀರದ ಹಾಗೆ ಇರುವ ಕಾರಣದಿಂದ ಅಲ್ಲಾಹನು ನಮಗೆ ಪದೇ ಪದೇ ಕಲಿಸಿಕೊಟ್ಟಿದ್ದಾನೆ. ಶಫಾಅತ್ ಅಂಗೀಕರಿಸುವುದು ಅವನ ಕೆಲಸವೇ ಆಗಿದ್ದರೂ ಅವನು ಹೇಳಿದ್ದಾನೆ ನೀವು ನಿಮ್ಮ ಸಹೋದರರಿಗೋಸ್ಕರ ಶಫಾಅತ್ ಮಾಡಿರಿ. ಎಂದರೆ ಅವರಿಗೋಸ್ಕರ ದುಆ ಮಾಡುತ್ತಾ ಇರಿ ಎಂದು. ಶಫಾಅತ್ ಅಥವಾ ಅನುಕಂಪದ ದುಆದಿಂದ ನೀವು ದೂರಸರಿಯಬೇಡಿರಿ. ನೀವು ಪರಸ್ಪರ ದುಆ ಮಾಡುವ ಹಕ್ಕನ್ನು ಹೊಂದಿರುವಿರಿ. ಒಬ್ಬರಿನ್ನೊಬ್ಬರ ಬಗ್ಗೆ ಅತ್ಯಂತ ಹೆಚ್ಚಿನ ಅನುಕಂಪವನ್ನು ಹೊಂದಿರಬೇಕು. ಧರ್ಮಕ್ಕೆ ಸಂಬಂಧಿಸಿ ಎರಡೇ ಎರಡು ಪರಿಪೂರ್ಣ ಭಾಗಗಳಿವೆ. ಒಂದು ದೇವನನ್ನು ಪ್ರೀತಿಸುವುದು. ಇನ್ನೊಂದು ಮಾನವರೊಂದಿಗೆ ಎಂತಹ ಪ್ರೀತಿ ಹೊಂದಬೇಕೆಂದರೆ ಅನ್ಯರ ಕಷ್ಟವನ್ನು ತನ್ನ ಸ್ವಂತ ಕಷ್ಟ ಎಂದು ಗ್ರಹಿಸಬೇಕು ಮತ್ತು ಅವರಿಗೋಸ್ಕರ ದುಆ ಮಾಡಬೇಕು. ಇದನ್ನೇ ಬೇರೆ ಶಬ್ದದಲ್ಲಿ ಶಫಾಅತ್ ಎಂದು ಕರೆಯಲಾಗುತ್ತಿದೆ.

ನಾವು ಆಯತುಲ್ ಕುರ್‌ಸೀ ಪಠಿಸುವಾಗ ಈ ತತ್ವವನ್ನು ನಮ್ಮ ಲಕ್ಷ್ಯದಲ್ಲಿರಿಸಿದರೆ ಮಾನವರಿಗೋಸ್ಕರ ನಮ್ಮ ಅನುಕಂಪದ ಭಾವನೆಗಳು ವರ್ಧಿಸುವುವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಯತುಲ್ ಕುರ್‌ಸೀ ಪಠಿಸಲು ಉಪದೇಶಿಸಿರುವುದು ಪವಿತ್ರ ಖುರ್‌ಆನನ್ನು ನಂಬುತ್ತಿರುವ ನಾವು ಪರಸ್ಪರ ಸಹಾನುಭೂತಿಯ ಸಂಬಂಧ ಸ್ಥಾಪಿಸುವ ಬಗ್ಗೆ ವಿಶಿಷ್ಟ ಉಪದೇಶದ ರೂಪದಲ್ಲಾಗಿದೆ. ಅದಲ್ಲದೆ ಮಾನವರೆಲ್ಲರ ಬಗ್ಗೆ ಸಾರ್ವತ್ರಿಕ ಲಕ್ಷ್ಯ ನೀಡಲು ಸಹ ಗಮನ ಹರಿಸಲಾಗಿದೆ. ಪ್ರತಿಯೊಬ್ಬನಿಗೋಸ್ಕರ ಅನುಕಂಪದ ಭಾವನೆ ನಿಮ್ಮ ಹೃದಯದಲ್ಲಿ ಇರಬೇಕಾಗಿದೆ. ಶಫಾಅತ್ ಎಂಬ ಅರಬಿ ಶಬ್ದ ಶಫ್‌ಅ ಎಂಬ ಮೂಲ ಶಬ್ದದಿಂದ ಬಂದುದಾಗಿದೆ. ಶಫ್‌ಅ ಎಂದರೆ ಜೋಡಿ ಎಂದು ಅರ್ಥ. ಒಬ್ಬನನ್ನು ಶಫೀಅ್ ಎಂದು ಕರೆಯಬೇಕಾದರೆ ಅವನು ಪರಿಪೂರ್ಣ ಅನುಕಂಪಭರಿತನಾಗಿ ಇನ್ನೊಬ್ಬನಿಗೆ

ಜೋಡಿಯಾಗಿ ಅವನಲ್ಲಿ ತಲ್ಲೀನನಾಗುತ್ತಾನೆ. ಅವನು ತನಗೆ ಸ್ವಾಸ್ಥ್ಯವನ್ನು ಇಚ್ಛಿಸುವ ಹಾಗೆ ಅನ್ಯರಿಗೂ ಇಚ್ಛಿಸುತ್ತಾನೆ. ಒಬ್ಬನು ಇನ್ನೊಬ್ಬನಿಗೆ ಶಫಾಅತ್ ರೀತಿಯಲ್ಲಿ ಅನುಕಂಪ ತೋರಿಸುವ ತನಕ ಅವನ ದೀನ್ ಪರಿಪೂರ್ಣವಾಗಲಾರದು. ಲೋಕದಲ್ಲಿ ಶಫಾಅತ್ ಮಾಡುವ ಉದಾಹರಣೆ ತೋರಿಸಿದವನೇ ಪರಲೋಕದಲ್ಲಿ ಶಫಾಅತ್ ಮಾಡುವ ಶಫೀಅ್ ಆಗುವನು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಡೆಗೆ ನೋಡುವಾಗ ಅವರು ಶಫೀಅ್ ಆಗಿರುವುದು ಅತ್ಯಂತ ಸ್ಪಷ್ಟವಾಗಿ ತಿಳಿಯುತ್ತದೆ. ಅವರ ಶಫಾಅತ್ ಮೂಲಕವೇ ಅವರ ಬಡ ಸಹಾಬರು ಸಿಂಹಾಸನಾರೂಢರಾಗಿ ಮಾಡಲ್ಪಟ್ಟರು. ಅವರ ಶಫಾಅತ್ ಮೂಲಕ ಎಂತಹ ಜನರು ಏಕದೇವ ವಿಶ್ವಾಸಿಗಳಾದರೆಂದರೆ ಅಂತಹ ಉದಾಹರಣೆ ಯಾವ ಕಾಲಘಟ್ಟದಲ್ಲಿಯೂ ಲಭಿಸುವುದಿಲ್ಲ. ಅವರ ಶಫಾಅತ್ ಪ್ರಭಾವದ ಕಾರಣದಿಂದಲೇ ಅವರನ್ನು ಅನುಸರಿಸುವವರು ಇಂದು ಸಹ ಅಲ್ಲಾಹನಿಂದ ಸತ್ಯವಾದ ಇಲ್‌ಹಾಮ್ ಗಳಿಸುತ್ತಾ ಇದ್ದಾರೆ.

ಆಯತುಲ್ ಕುರ್‌ಸೀಯ ಕೊನೆಯ ಭಾಗದಲ್ಲಿ ಅಲ್ಲಾಹನ ಎರಡು ಗುಣಗಳನ್ನು ಪ್ರಸ್ತಾಪಿಸಲಾಗಿದೆ. ಒಂದು ಅಲಿಯ್ಯುನ್. ಎಂದರೆ ಅತ್ಯಂತ ಉನ್ನತ ವೈಭವಶಾಲಿ. ಅದಕ್ಕಿಂತ ಉನ್ನತವಾದ ವೈಭವ ಬೇರೆ ಯಾರಿಗೂ ಇಲ್ಲ. ಅವನು ಭೂಮ್ಯಾಕಾಶಗಳ ಒಡೆಯನಾಗಿದ್ದಾನೆ. ಇನ್ನೊಂದು ಗುಣ ಅಝೀಮ್ ಎಂದಾಗಿದೆ. ಅಲ್ಲಾಹನ ಘನತೆ ಮತ್ತು ಶ್ರೇಷ್ಠತೆ ಎಷ್ಟು ಬೃಹತ್ತಾಗಿದೆ ಎಂದರೆ ಅದರ ಸಮೀಪಕ್ಕೆ ತಲಪಲು ಯಾರಿಗೂ ಸಾಧ್ಯವಿಲ್ಲ. ಅವನ ಉನ್ನತ ವೈಭವ ಎಲ್ಲವನ್ನೂ ಆವರಿಸಿರುತ್ತದೆ. ಯಾವುದೇ ವಸ್ತು ಅವನ ನಿಯಂತ್ರಣದಿಂದ ಹೊರಗೆ ಇರುವುದಿಲ್ಲ. ಆಯತ್ ಕುರ್‌ಸೀಯ ಕೊನೆಯ ಭಾಗದ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಕುರ್‌ಸೀ (ಸಿಂಹಾಸನ) ಬಗ್ಗೆ ಹೀಗೆ ಹೇಳಲಾಗಿದೆ: **ವಸಿಅ ಕುರ್‌ಸಿಯ್ಯುಹುಸ್ಸಮಾವಾತಿ ವಲ್ ಅರ್‌ಝ ವಲಾ ಯಊದುಹೂ ಹಿಫ್‌ಝುಹುಮಾ ವಹುವಲ್ ಅಲಿಯ್ಯುಲ್ ಅಝೀಮ್.** ಎಂದರೆ ಅಲ್ಲಾಹನ ಸಿಂಹಾಸನದ ಒಳಗೆ ಭೂಮ್ಯಾಕಾಶಗಳು ಇರಿಸಲ್ಪಟ್ಟಿವೆ. ಅವನು ಅವುಗಳನ್ನೆಲ್ಲಾ ಎತ್ತಿಕೊಂಡಿದ್ದಾನೆ. ಅವುಗಳನ್ನು ಹೊತ್ತುಕೊಂಡುದರಿಂದ ಅವನಿಗೆ ಆಯಾಸವಾಗುವುದಿಲ್ಲ. ಅವನು ಅತ್ಯಂತ ಉನ್ನತನಾಗಿದ್ದಾನೆ. ಯಾವುದೇ ಬುದ್ಧಿ ಅವನ ವಾಸ್ತವಿಕತೆಯನ್ನು ತಲಪಲಾರದು. ಅವನು ಅತ್ಯಂತ ಬೃಹತ್ತಾಗಿರುವವನಾಗಿದ್ದಾನೆ. ಅವನ ಬೃಹತ್ ಅಸ್ತಿತ್ವದ ಮುಂದೆ ಎಲ್ಲಾ ವಸ್ತುಗಳು ನಿಸ್ಸಾರವಾಗಿವೆ. ಕುರ್‌ಸೀ (ಸಿಂಹಾಸನ) ಎಂದು ಹೇಳಿದುದು ಆಲಂಕಾರಿಕವಾಗಿ ಆಗಿದೆ. ಭೂಮ್ಯಾಕಾಶಗಳು ಅಲ್ಲಾಹನ ಸ್ವಾಧೀನದಲ್ಲಿವೆ ಎಂದು ಸೂಚಿಸಲು ಬಳಸಲಾಗಿದೆ. ಅಲ್ಲಾಹನ ಸ್ಥಾನ ಎಲ್ಲವುಗಳಿಗಿಂತ ದೂರವಾಗಿದೆ. ಅವನ ಬೃಹತ್ ಶಕ್ತಿ ಅಪರಿಮಿತವಾದುದಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ಈ ವಚನಗಳನ್ನು ಪಠಿಸಲು ಹೇಳಿರುವುದು ಈ ವಿಷಯಗಳನ್ನು ನಮ್ಮ ಮುಂದೆ ಇರಿಸಬೇಕೆಂಬ ಉದ್ದೇಶದಿಂದಾಗಿದೆ. ಹಾಗೆ ಮಾಡಿದರೆ ನಾವು ಅಲ್ಲಾಹನಿಂದ ಸಂರಕ್ಷಣೆ ಪಡೆಯುವೆವು. ಆದರೆ ಈ ವಚನಗಳನ್ನು ಕೇವಲ ಪಠಿಸಿದರೆ ಸಾಕಾಗಲಾರದು. ಈ ವಿಷಯಗಳ ಬಗ್ಗೆ ಚಿಂತಿಸಿ ಅವುಗಳನ್ನು ನಮ್ಮಲ್ಲಿ ಅಳವಡಿಸುವುದು ಸಹ ಆವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ವಚನಗಳ ಬಗ್ಗೆ ಹೇಳಿದುದನ್ನು ತಿಳಿದುಕೊಳ್ಳುವ ಆವಶ್ಯಕತೆ ಇದೆ. ಹೀಗೆ ಮಾಡಿದರೆ ಮನುಷ್ಯನು ಅಲ್ಲಾಹನ ಸಂರಕ್ಷಣೆ ಮತ್ತು ಅನುಗ್ರಹ ಗಳಿಸುವನು. ನಾವು ಆ ರೀತಿಯಲ್ಲಿ ಜೀವಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ – ಆಮೀನ್.

(ಕೊನೆಗೆ ಹುಝೂರ್ ಮುಕರ್ರಮ್ ಅಬ್ದುಲ್ ಖಾದಿರ್ ಡಾಹರಿಯವರ ಪತ್ನಿ ಮುಕರ್ರಮ ಆಬಿದ ಬೇಗಮ್ ಸಾಹಿಬರ ಸದ್ಗುಣಗಳನ್ನು ವಿವರಿಸಿ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಪ್ರಕಟಿಸಿದರು.)

*****


***Friday Sermon delivered by Hadrath Khaleefatul Masih Al Khamis***[(atba)]

*At Masjid Baithul Futhuh, London. on 02-02-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon